ಮೈಸೂರ ಗಿಜಿಟ.

ಸಂ. XXXI.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 46.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 19, ಸ್ರ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಷ ವ ಯಜ್ಯೂಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜಾರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಪ್ರತೀ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 7ನೇ ನವೆಂಬರ್ 1896. (ಮೈಸೂರ್.)

ನಂ. 5344.—ಜು. 612, ಮೆಸ್ಸರ್ ಎಂ. ರಾಮಸ್ವಾಮಿ ಅಯ್ಯರ್, ಬಿ. ಎ. ಬಿ. ಎಲ್. ಯವರು (ಮಾಜಿ ಮಜಕೂರು ಗುತ್ತಿಲಗಾಯತು ಸಬಾರ್ಡಿನೇಟ್ ಜಡ್ಜಿಗಳ ಎರಡನೇ ಕ್ಲಾಸಿನಿಂದ 1ನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಂ. 5347—ಜು. 615, ನಂದೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್‌ರಾದ ಮೆಸ್ಸರ್ ಟಿ. ನರಹರಿರಾಯರವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕಾಹಿಲೆ ರಜಾದಲ್ಲಿರುವ ಕಾಲದಲ್ಲಿ ಈ ಕೆಳಗೆ ಕಂಡ ಹಂಗಾಮಿ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ;—

(1) ಮೆಸ್ಸರ್ ಸಿ. ಕೈಸ್ ಯವರು ಡಿಸ್ಟ್ರಿಕ್ಟ್ ಜಡ್ಜಿಗಳ 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ.
(2) ಮೆಸ್ಸರ್ ಬಿ. ತಿರುಮಲ ಚಾರ್ಯು, ಬಿ. ಎಲ್., ಯವರು ಡಿಸ್ಟ್ರಿಕ್ಟ್ ಜಡ್ಜಿಗಳ 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.

ನಂ. 5350.—ಜು. 618, ಮೆಸ್ಸರ್ ಎಂ. ರಾಮಸ್ವಾಮಿ ಅಯ್ಯರ್ ಯವರು ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್‌ರಾಗಿ ಆಕ್ಟಿಂಗ್ ತರೀಕೆ ಕೆಲಸದ ಮೇಲಿರುವ ಕಾಲದಲ್ಲಿ ಮೆಸ್ಸರ್ ಎಸ್. ಆರ್. ಸುಬ್ಬರಾಯ ಐಯ್ಯರ್ ಯವರು ಸಬಾರ್ಡಿನೇಟ್ ಜಡ್ಜಿಗಳ 1ನೇ ಕ್ಲಾಸಿಗೆ ಹಂಗಾಮಿಯಾಗಿ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೇ ನವಂಬರ್ 1896.

ನಂ. 5388 —ಜು. 629, ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟ್ ಮೆಸ್ಸರ್ ಡಿ. ದೇವರಾಜ ಅರಸಿನವರಿಗೆ, 1896ನೇ ಅಕ್ಟೋಬರ್ 2ನೇ ಮಾರ್ಕ್ಕಂ 4600—ಜು. 505ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ತಲಬಿಲ್ಲದ ರಜಾ ಇನ್ನೂ ಎರಡು ತಿಂಗಳುಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ಪೋಲೀಸ್ ಆಸ್ಟಿಂಗ್ ಸೂಪರ್‌ಟೆಂಡೆಂಟರಾದ ಮೆಸ್ಸರ್ ಡಿ. ಎ. ಖಲ್ಲಾರ್ಡ್ ಯವರು ಸದರೀ ಮೆಸ್ಸರ್ ಡಿ. ದೇವರಾಜ ಅರಸಿನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸಿನ ಚಾರ್ಜಿನಲ್ಲರತಕ್ಕದ್ದು.

ತಾರೀಖು 16ನೇ ನವೆಂಬರ್ 1896.

ನಂ. 5591.—ಜು. 645, ಮುನ್ಸಿಫ್ ಮೆಸ್ಸರ್ ಬಿ. ಬಸವಾರಾಧ್ಯ, ಬಿ. ಎ, ಬಿ. ಎಲ್., ಯವರು ಅವರಿಗೆ 1896ನೇ ಸೆಪ್ಟಂಬರ್ 7ನೇ ಮಾರ್ಕ್ಕಂ 3389.—ಜು. 346ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾದಿಂದ 1896ನೇ ಅಕ್ಟೋಬರ್ 21ನೇ ತಾರೀಖಿನ ಪೂರ್ವಾನ್ಹ ಶ್ರೀರಂಗಪಟ್ಟಣದಲ್ಲಿ ಕೆಲಸಕ್ಕೆ ವಾಪಸು ಬಂಬಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಒಂದು ತಿಂಗಳೂ ಮೂರುದಿನಗಳು ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 5593.—ಜು. 647, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ್ ಸಿಟಿ ಮಾಜಿಸ್ಟ್ರೇಟರಾದ ಮೆಸ್ಸರ್ ಎಸ್. ವೈದ್ಯನಾಥ ಅಯ್ಯರ್ ಯವರಿಗೆ ಮಾಹೆ ಮಜಕೂರ 16ನೇ ತಾರೀಖಿನ ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3937.—ರೆ. 1354, ಸ್ಯ 1888ನೇ ಇಸವಿಯ IVನೇ ರೆಗ್ಯುಲೇಷನ್ ಆದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರ ಅನುಸರಿಸಿ, ನಂಜನಗೂಡು ತಾಲ್ಲೂಕಿನಲ್ಲಿರುವ ಚನ್ಯಾನೂರು, ಹಟ್ಟುವಲಾ, ಮಂದನಹಳ್ಳಿ, ಮಚ್ಚೂರು ಮತ್ತು ಹಲ್ಲಹಳ್ಳಿ ಸರ್ವ ಇನಾಂ ಗ್ರಾಮಗಳಿಗೆ ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳನ್ನು ಲಗಾವ್ ಮಾಡುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸಿರುತ್ತಾರೆ.

ತಾರೀಖು 25ನೇ ಅಕ್ಟೋಬರ್ 1896.

ನಂ. 4041.—ರೆ. ಫೈ. 148.—95, ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

	ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1.	ಕಾಹಳ್ಳಿ ..	ತಿರುಮಕೂಡ್ಲು ನರಸೀಪುರ.	ನಂಜನಗೂಡು.
2.	ಹಾರೋಪುರ ..		
3.	ಗಣಗನೂರು ..	ನಂಜನಗೂಡು.	ಚಾಮರಾಜನಗರ.

ತಾರೀಖು 29ನೇ ಅಕ್ಟೋಬರ್ 1896.

ನಂ. 4034.—ಫಾ. ಫೈ. 1.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟಿಗೆ ವಳಿತವಾದ ಫಾರೆಸ್ಟ್ಸುಗಳ ಸಬ್ ಅಸಿಸ್ಟೆಂಟ್ ಕ್ವಸರ್‌ವೇಟರ್ ಮೆಸ್ಸರ್ ಪಿ. ಈ. ಬ್ಯಸ್ಸ್ ಯವರಿಗೆ, 1896ನೇ ಅಕ್ಟೋಬರ್ 2ನೇ ಮಾರ್ಕ್ಕಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ಅಶುದ್ಧ.

ನಂ. 4037.—ಫಾ. ಫೈ. 105.—95, ಸ್ಯ 1896ನೇ ಫೆಬ್ರವರಿ 20ನೇ ಮಾರ್ಕ್ಕಂ Iನೇ ಭಾಗದ ಮೈಸೂರ ಗೆಜೆಟ್ಟಿನ ಕನ್ನಡ ಭಾಗದಲ್ಲಿ ಪ್ರಾಯಿಷ್ಯಾಗಿರುವ 1896ನೇ ಜನವರಿ 8ನೇ ಮಾರ್ಕ್ಕಂ 6084.—ಫಾ. ಫೈ. 105.—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯ 8ನೇ ಪ್ಯಾರಾವಿನ 12ನೇ ಸಬ್ಡಿವಿಯಲ್ಲಿ "ಹೆಬ್ಬಿವರು ಒರ 100ಕ್ಕೆ" ಎಂಬ ಮಾತುಗಳ ಯಾದುರಿಗೆ "

" ಎಂಬದಕ್ಕೆ "2—0—0" ಎಂಬದಾಗಿ ಒಪ್ಪತಕ್ಕದ್ದು.

ತಾರೀಖು 1ನೇ ನವಂಬರ್ 1896.

ನಂ. 4107.—ಫಾ. ಫೈ. 91 —95, ಪಿಕಾರಿಪುರದ ಫಾರೆಸ್ಟ್ಸ್ ಸಬ್ ಡಿವಿಜ್ ಫಾರೆಸ್ಟ್ಸುಗಳ ಅಸಿಸ್ಟೆಂಟ್ ಕ್ವಸರ್‌ವೇಟರಿ ಮೆಸ್ಸರ್ ಬಿ. ಶ್ರೀನಿವಾಸರಾಯರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ 1896ನೇ ಆಗಸ್ಟ್ 15ನೇ ಮಾರ್ಕ್ಕಂ 1832.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಕೊಡಲ್ಪಟ್ಟಿದ್ದ ಕಾಹಿಲೆ ರಜಾ ಇನ್ನೂ ಆರುವಾರಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

2. ಮೆಸ್ಸರ್ ಶ್ರೀನಿವಾಸರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟ್ಸುಗಳ ಯಕ್ಸ್ಟ್ರಾ ಅಸಿಸ್ಟೆಂಟ್ ಕ್ವಸರ್‌ವೇಟರ್ ಮೆಸ್ಸರ್ ಜಿ. ಜಿ. ಮೂರ್ತಿರೊಪುರವರು, ಫಾರೆಸ್ಟ್ಸುಗಳ ಅಸಿಸ್ಟೆಂಟ್ ಕ್ವಸರ್‌ವೇಟರಾಗಿಯೂ ಮತ್ತು 2ನೇ ಗ್ರೇಡ್ ರೇಂಜರ್ ಮೆಸ್ಸರ್ ಎಂ. ಶ್ರೀನಿವಾಸರಾಯರು, ಫಾರೆಸ್ಟ್ಸುಗಳ ಯಕ್ಸ್ಟ್ರಾ ಅಸಿಸ್ಟೆಂಟ್ ಕ್ವಸರ್‌ವೇಟರಾಗಿಯೂ ಆಕ್ಟಿಂಗ್ ತರೀಕ ಇರತಕ್ಕದ್ದು.

ತಾರೀಖು 29ನೇ ಅಕ್ಟೋಬರ್ 1896.

ನಂ. 4024—ಕೆ. 1388, ಸನ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಬಾಬಾಬುಡನ್ ಬೆಟ್ಟದ ರಸ್ತೆಯನ್ನು ಬಡಾಭುಸುವ ಬಗ್ಯಾಗಿ ಬೇಕಾಗಿರುತ್ತವೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಜಮೀನ್ ತಪ್ಶೀಲು.				ಹದ್ದು ಬಂದಿ.			
				ಸರ್ವೆ ನಂ.	ಎಕರೆ ಗಳು.	ಗುಂಟೆ ಗಳು.	ಗಜಗಳು.	ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಚಿಕ್ಕಮಗಳೂರು.		ಬ್ಲ್ಲಿವಾರ	ರಾಮಪ್ಪ ..	48ರ ಭಾಗ	..	34	66	ನಂ. 48 ಮ 27ರ ಭಾಗ	ನಂ. 48ರ ಭಾಗ	ನಂದಿಬಟ್ಟ ನಂ. 28ರ ಭಾಗ	ನಂ. 48 ಮ 27ರ ಭಾಗ
		ನಂದಿಬಟ್ಟ	ಮೆಸ್ಟರ್ ಜಿ. ಆರ್. ಆಲಿವರ್ ..	28	..	5	88	ನಂ. 28ರ ಭಾಗ	ನಂ. 28 ಡಿಟೋ	ಬ್ಲ್ಲಿವಾರದ ನಂ. 28	ನಂದಿಬಟ್ಟ ನಂ. 48ರ ಭಾಗ
		ಡಿಟೋ	ಕಲ್ಲೇಗವ್ವಡ ..	90 ಮ 29	..	23	66	ನಂ. 90 ಡಿಟೋ	ನಂ. 90 ಮ 29 ಡಿಟೋ	ನಂದಿಬಟ್ಟ ನಂ. 30	ನಂ. 80ರ ಭಾಗ
		ಡಿಟೋ	ಕೆ. ರಂಗೇಗವ್ವಡ ..	80	..	11	55	ನಂ. 80 ಡಿಟೋ	ನಂ. 80 ಡಿಟೋ	ನಂ. 29ರ ಎಲ್ಲೆ	ನಂ. 26ರ ಡಿಟೋ
		ಡಿಟೋ	ಡಿಟೋ ..	26	..	16	66	ನಂ. 26 ಡಿಟೋ	ನಂ. 26 ಡಿಟೋ	ನಂ. 80 ಮತ್ತು ನಂ. 26ರ ಭಾಗ	ನಂ. 81
		ಡಿಟೋ	ಎಲ್. ರಂಗೇಗವ್ವಡ .	81	.	21	..	ನಂ. 81 ಡಿಟೋ	ನಂ. 81 ಡಿಟೋ	ನಂ. 26	ರೆಗಡ ಗ್ರಾಮದ ನಂ. 5
						1	38	33			
	ಲಿಂಗದಹಳ್ಳಿ.	ರೆಗಡ	ಟಿ. ಮೊಹಿದೀನ್‌ಸಾಬ್ ..	36	1	28	22	ನಂ. 36ರ ಭಾಗ	ನಂ 36ರ ಭಾಗ	ನಂ 4ರ ಎಲ್ಲೆ	ನಂ. 36ರ ಭಾಗ ಮತ್ತು ನಂ. 4ರ ಎಲ್ಲೆ
		ಡಿಟೋ	ಹಸನ್ ಅಹಮ್ಮದ್ ..	34	..	19	11	ನಂ. 34 ಮ 4ರ ಭಾಗ	ನಂ. 33	ನಂ. 4	ನಂ. 34ರ ಭಾಗ
		ಡಿಟೋ	ಮೆಸ್ಟರ್ ಡಿ. ಹರ್ರಿ ..	33	..	11	55	ನಂ. 34	ನಂ. 33ರ ಭಾಗ	ನಂ. 33ರ ಭಾಗ	ನಂ. 35
		ಡಿಟೋ	ಹಯಾತ್‌ಖಾನ್‌ಸಾಬ್ ..	35	1	28	88	ನಂ. 35ರ ಭಾಗ	ನಂ. 35ರ ಭಾಗ	ನಂ. 35 ಮ 35ರ ಭಾಗ	ನಂ. 35 ಮ 32ರ ಭಾಗ
		ಡಿಟೋ	ಕರಿಗವ್ವಡ ..	32	..	5	88	ನಂ. 32 ಮ 31ರ ಭಾಗ	ನಂ. 32 ಮ 22ರ ಭಾಗ	ನಂ. 35	ನಂ. 31
		ಡಿಟೋ	ಮೆಸ್ಟರ್ ಡಿ. ಹರ್ರಿ ..	31	1	3	88	ನಂ. 31ರ ಭಾಗ	ನಂ. 31ರ ಭಾಗ	ನಂ. 32	ನಂ. 1
					5	16	110				
			ಜುಮ್ಲಾ ತೀರ್ಕೆರೆ ತಾಲ್ಲೂಕು .		8	9	88				
	ಚಿಕ್ಕಮಗಳೂರು.	ಮೇಲಿನಹುಲ್ಲತ್ತಿ	ವೇಗವ್ವಡ ..	45	..	19	88	ನಂ. 45ರ ಭಾಗ	ನಂ. 45ರ ಭಾಗ	ನಂ. 44	ನಂ. 42
		ಡಿಟೋ	ಅಬ್ದುಲ್‌ಖಾದರ್ ..	40,41 ಮ42	1	30	77	ನಂ. 40,41 ಮ42 ಭಾಗ	ನಂ. 40,41 ಮ42ರ ಭಾ.	ನಂ. 45	ನಂ. 25
		ಡಿಟೋ	ಇನಸ್‌ಖಾನ್ .	25	1	3	33	ನಂ. 25ರ ಭಾಗ	ನಂ. 25ರ ಭಾಗ	ನಂ. 40	ನಂ. 25 ಮ 23ರ ಭಾಗ
		ಡಿಟೋ	ಡಾಕ್ಟರ್ ಸ್ಮಿತ್ ..	16	2	7	99	ನಂ. 16ರ ಭಾಗ	ನಂ. 16 ಮ 23ರ ಭಾಗ	ನಂ. 16 ಮ 23ರ ಭಾಗ	ನಂ. 16ರ ಭಾಗ
					5	21	55				
		ಹೆರಿ ಮನೆ	ಮೆಸ್ಟರ್ ಆಲಿವರ್ ..	20	7	10	110	ನಂ. 20ರ ಭಾಗ	ನಂ. 20 ಮ 80ರ ಭಾಗ	ನಂ 20 ಮ 80ರ ಭಾಗ	ನಂ. 21ರ ಭಾಗ
			ಜುಮ್ಲಾ ಚಿಕ್ಕಮಗಳೂರುತಾಲ್ಲೂಕು ..	..	12	32	44				
			ಎರಡು ತಾಲ್ಲೂಕುಗಳ ಒಟ್ಟು ಜುಮ್ಲಾ.	..	21	2	11				

ತಾರೀಖು 1ನೇ ಅಕ್ಟೋಬರ್ 1896.

ನಂ. 3573.—ಫಾ. ಫೈ. 166—95, ಸ್ಯ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹದ್ದು ವಿಂಗಡಿಸಲ್ಪಟ್ಟ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟ್ಗಳು ವ ಸ್ಯಾಂಟೇಷನ್ಗಳು ಮೇಲ್ಕಂಡ ಫಾರೆಸ್ಟ್ ರೂಲ್ಸಿನ Iನೇ ರೂಲ್ ಅನುಸರಿಸಿ ಸ್ಟೇಟ್ ಫಾರೆಸ್ಟ್ಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ:—

ನಂಬರು.	ಫಾರೆಸ್ಟ್ಗಳ ವ ಸ್ಯಾಂಟೇಷನ್ಗಳ ಹೆಸರುಗಳು.	ವಿಸ್ತೀರ್ಣ.	ಹದ್ದು ಬಂದಿ.
1	ಬೇಗೂರ ಫಾರೆಸ್ಟ್ (ಹೆಗ್ಗಡದೇವನ ಕೋಟೆ ತಾಲ್ಲೂಕು.)	ಸುಮಾರು 42 ಚದುರ ಮೈಲಿಗಳು.	ಉತ್ತರಕ್ಕೆ—ಡಿವಾರ್ಕೇಷನ್ ಲೈನು ಗಂಟೂರ ವರಿವಿಗೆ ಪೂರ್ವ ದಿಕ್ಕಿನಲ್ಲಿ ಕಬ್ಬನಿ ನದಿಯನ್ನನುಸರಿಸಿ ನಂ. 1ರ ಈಶಾನ್ಯ ದಿಕ್ಕಿನ ಎಲ್ಲೆ ಉದ್ದಕ್ಕೂ ಆಗ್ನೇಯ ದಿಕ್ಕಿನಲ್ಲಿ ಹೊರಟು ಗಂಟೂರ ನಂ. 6ರ ದಕ್ಷಿಣ ಯಲ್ಲೆಗೆ ಹೋಗುತ್ತದೆ; ಅಲ್ಲಿಂದ ಹೊಸಹಳ್ಳಿಯ ನಂ. 47ರ ಉದ್ದಕ್ಕೂ ಪೂರ್ವಕ್ಕೆ ಹೋಗಿ ಮತ್ತು ಅಲ್ಲಿಂದ ಬೈರನಹಳ್ಳಿಯ ನಂ. 55ರ ದಕ್ಷಿಣ ಯಲ್ಲೆಯನ್ನು ಮತ್ತು ಬೇಗೂರ ನಂ. 48ರ ದಕ್ಷಿಣಯಲ್ಲೆಯನ್ನೂ ಅಲ್ಲಿಂದ ಕೆಂಚೇನಹಳ್ಳಿಯ ನಂ. 1ರ ಎಲ್ಲೆಯನ್ನೂ ಬಿಟ್ಟು ಹೋಗಿ ವಡಲಿಹಳ್ಳದ ಬಳಿ ಕೊನೆ ಮುಟ್ಟುತ್ತದೆ. ದಕ್ಷಿಣಕ್ಕೆ—ಮಲಬಾಲ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ವಡಲಿಹಳ್ಳ. ಪಶ್ಚಿಮಕ್ಕೆ—ಕಬ್ಬನಿ ನದಿ.
2	ಐನೂರುಮೂರಿ ಗುಡಿ ಫಾರೆಸ್ಟ್.	ಸುಮಾರು 38½ ಚದುರ ಮೈಲಿಗಳು.	ಉತ್ತರಕ್ಕೆ—ಲೈನು ವಡಲಿಹಳ್ಳದಿಂದ ಹೊರಟು ಬಂಕವಾಡಿಯ ನಂ. 36ರ ನೈಋತ್ಯ ಎಲ್ಲೆಯ ಉದ್ದಕ್ಕೂ ಹೋಗಿ ಸರ್ವೆ ನಂ. 35ರ ಸ್ವಲ್ಪ ಭಾಗದ ಅಡ್ಡವಾಗಿ ಹಿಂದೆ ಹೇಳಿರುವದರ ಸಣ್ಣ ಮೂಲೆಯನ್ನು ದಾಟಿ ಮತ್ತು ಬಂಕವಾಡಿಯ ನಂ. 34ರ ಅರ್ಧಕ್ಕೆ ಹೆಚ್ಚಾಗಿ ಕೇರಿಸಿಕೊಂಡು, ಅಲ್ಲಿಂದ ಚಿಕ್ಕ ಬಸೆಗೆಯ ನಂ. 2ರ ದಕ್ಷಿಣ ಎಲ್ಲೆಯನ್ನು ಬಿಟ್ಟು ಹೋಗಿ ಮತ್ತು ಅಲ್ಲಿಂದ ಮಲಿಯೂರ ನಂ. 8 ವ 11ರ ಉದ್ದಕ್ಕೂ ಮತ್ತು ಹೆರೆಹಳ್ಳಿಯ ನಂ. 38ರ ಉದ್ದಕ್ಕೂ ಮತ್ತು ಕರ್ನಗಾಲದ ನಂ. 27 ವ 28ರ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಆಲನಹಳ್ಳಿಯ ನಂ. 6ರ ಉದ್ದಕ್ಕೂ ನಗ್ಗಾನದಿಗೆ ಈಶಾನ್ಯ ದಿಕ್ಕಿನಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ನಗ್ಗಾನದಿ. ಪಶ್ಚಿಮಕ್ಕೆ—ವಡಲಿಹಳ್ಳ.
3	ಮೇಟಿಕುಪ್ಪೆ ಫಾರೆಸ್ಟ್.	40 ಚದುರ ಮೈಲಿಗಳು.	ಉತ್ತರಕ್ಕೆ—ಹುಣಸೂರಿಂದ ಮೂರ್ಕಲ್ ರಸ್ತೆ, ಸೊಲ್ಲಾಪುರದಿಂದ ಬಂಡಿಜಾಡು ಮತ್ತು ಜೇರಿಹೆಬ್ಬಳ್ಳದ ಮೂಲ ಇವುಗಳ ಸಂಗಮವರಿವಿಗೆ, ವೀರನಹೊಸಹಳ್ಳಿ ಸ್ಟೇಟ್ ಫಾರೆಸ್ಟಿನ ಡಿವಾರ್ಕೇಷನ್ ಲೈನ್ ಮತ್ತು ಮೂರ್ಕಲ್ ರಸ್ತೆ ಇವುಗಳ ಸಂಗಮದ ವರಿವಿಗೆ, ಈಶಾನ್ಯದಲ್ಲಿ ಜೇರಿಹೆಬ್ಬಳ್ಳದ ಮೂಲದಿಂದ $1\frac{1}{4}$ ಮೈಲಿ ಬಳಿಯ ಡಿವಾರ್ಕೇಷನ್ನನ್ನು ಸಂಧಿಸುತ್ತ. ದಕ್ಷಿಣಕ್ಕೆ—ಕಾಕನಕೋಟೆ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—1886ನೇ ಇಸವಿಯಲ್ಲಿ ಹೊಸದಾಗಿ ವಿಂಗಡಿಸಲ್ಪಟ್ಟ ಡಿವಾರ್ಕೇಷನ್ ಲೈನು, ದಕ್ಷಿಣಕ್ಕೆ ಜೇರ್ಹೆಬ್ಬಳ್ಳದಿಂದ ಹೊರಟು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:— (a) ಮಾಸಿಕಟ್ಟೆ ಹೆಬ್ಬಳ್ಳ, ಮಾಸಿಕಟ್ಟೆಇಂದ 3 ಫರ್ಲಾಂಗುಗಳು, (b) ಕುರುಬರ ಪಂಚಳ್ಳ, (c) ಜೇನ್ಕೊರೆಕಳ್ಳ, ಬಿದುರ್ತಲ್ ಕೊಲಚಿಯ ಪೂರ್ವಕ್ಕೆ ಸುಮಾರು ಒಂದು ಫರ್ಲಾಂಗು, (d) ನೇತಕಲ್ ಗುಡಿಹಳ್ಳ, ನೇತಕಲ್ ಗುಡಿಯ ಪಶ್ಚಿಮಕ್ಕೆ ಸುಮಾರು 2 ಫರ್ಲಾಂಗುಗಳು, (e) ಸರತಿನದಿ, ಪಚ್ಚಕ್ಟಟ್ಟೆಯ ಪೂರ್ವಕ್ಕೆ ಸುಮಾರು ಒಂದು ಮೈಲಿ, (f) ಮದನಹಳ್ಳಿ ಕಾಡಿನಬಳಿ ಇರುವ ನಾಗರಹೊಳೆ ಮತ್ತು ಮೇಟಿಕುಪ್ಪೆ ಫಾರೆಸ್ಟಿನಲ್ಲಿ ಹೊಸದಾಗಿ ಏರ್ಪಟ್ಟ ಬ್ಲಾಕಿನ ಪೂರ್ವದಿಕ್ಕಿನ ಕೊನೆಯು ಮತ್ತು ಕೊಡಗಿಗೆ ಹೋಗುವ ಕಚ್ಚೇರಿ (ಅವಲಿದುರಿ) ಬಂಡಿಜಾಡಿನ ಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—(a) ಕೈವಾರದಿಂದ ಕುತ್ತಂಡ ಮೂರ್ಕಲ್ ವರಿವಿಗೆ ಮಲಬಾರ್ ಫಾರೆಸ್ಟ್, (b) ಕುತ್ತಂಡ ಮೂರ್ಕಲ್ನಿಂದ ಕರ್ಮರೆ ಕಿರ್ಕಲ್ ವರಿವಿಗೆ ಕೊಡಗು ಫಾರೆಸ್ಟ್ ಮತ್ತು (c) ವೀನರಹೊಸಹಳ್ಳಿ ಸ್ಟೇಟ್ ಫಾರೆಸ್ಟ್.

ನಂಬರ್.	ಫಾರೆಸ್ಟ್‌ಗಳ ಮತ್ತು ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಹದ್ದು ಬಂದಿ.
4	ಕಾಕನಕೋಟೆ ಫಾರೆಸ್ಟ್	5½ ಚದುರ ಮೈಲಿಗಳು.	ಉತ್ತರಕ್ಕೆ —ಬಿಸಲವಾಡಿ ರಸ್ತೆ. ದಕ್ಷಿಣಕ್ಕೆ —ಉಡಬೂರು ಕಾಡಿನಿಂದ ಸಾದಿಕಹಳ್ಳದ ವರೆವಿಗೆ ಕಬ್ಬನಿ ನದಿ. ಪೂರ್ವಕ್ಕೆ —ಉಪ್ಪರ್ ಕಾಡಿನಿಂದ ಹೊರಟು (21 ಅಡಿಗಳ ಅಗಲದ) ಡಿವಾರ್ಕೇಷನ್ ಲೈನಿನ ಉತ್ತರಕ್ಕೆ ಹೋಗಿ ತೆಂಕಲ್ ಗ್ರಾಮದ ಸರ್ವೆ ನಂ. 1ರನ್ನು ಸುತ್ತಿಕೊಂಡು, ಅಲ್ಲಿಂದ ಉಪ್ಪರ್ ನಂ. 1 ವ 4ರ ಉದ್ದಕ್ಕೂ ಕಾರಾಪುರದ ಸರ್ವೆ ನಂ. 1ರ ಉದ್ದಕ್ಕೂ ನಿಸ್ನೆ ಸರ್ವೆ ನಂ. 54 ವ 55ರ ಉದ್ದಕ್ಕೂ ಜೆಲ್ಲಹ್ಟ್ರ ನಂ. 70 ವ 8ರ ದಕ್ಷಿಣ ಎಲ್ಲೆಯ ಸುತ್ತಲೂ ಅವುಗಳನ್ನ ಸುತ್ತಿಕೊಂಡು ಮತ್ತು ಹಿಂದೆ ಹೇಳಿದ್ದರ ಪೂರ್ವ ಎಲ್ಲೆಯ ಉದ್ದಕ್ಕೂ ಹಾದು, ಅಲ್ಲಿಂದ ಮಂಜಗೌಡನಹಳ್ಳಿಯ ನಂ. 17ರನ್ನ ಬಿಟ್ಟು ಆದರ ಮೂಲಕವಾಗಿಯೂ ಹಳ್ಳಿಮಗ್ಗೆಯ ನಂ. 17ರ ಮೂಲಕವಾಗಿಯೂ ವಾಯವ್ಯ ದಿಕ್ಕಿನಲ್ಲಿ ಒಂದು ಮೂಲೆಯಿಂದ ಮತ್ತೊಂದು ಎದುರ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ —ಮಲಬಾರ್ ಸ್ಟೇಟ್ ಫಾರೆಸ್ಟ್.
5	ಕಾರಾಪುರ ಪ್ಲಾಂಟೇಷನ್ (ತೇಗ)	8 ಎಕರೆಗಳು	ಉತ್ತರಕ್ಕೆ —ಮೈಸೂರು, ಮಾನಂತವಾಡಿ ರಸ್ತೆ. ದಕ್ಷಿಣಕ್ಕೆ —ಗುಂಡತೂರು ಗ್ರಾಮ. ಪೂರ್ವಕ್ಕೆ —ಸಾಗುವಳಿಯಲ್ಲಿರುವ ಸರ್ವೆ ನಂ. 16. ಪಶ್ಚಿಮಕ್ಕೆ —ಸರ್ವೆ ನಂ. 17ನೇ ಖರಾಬ್.
6	ನಿಸ್ನೆ ಪ್ಲಾಂಟೇಷನ್ (ತೇಗ)	13⅛ ಎಕರೆಗಳು	ಉತ್ತರಕ್ಕೆ —ಸಾಗುವಳಿಯಲ್ಲಿರುವ ಸರ್ವೆ ನಂ. 45, 63 ವ 64. ದಕ್ಷಿಣಕ್ಕೆ —ಸಾಗುವಳಿಯಲ್ಲಿರುವ ಸರ್ವೆ ನಂ. 43. ಪೂರ್ವಕ್ಕೆ —ಸಾಗುವಳಿಯಲ್ಲಿರುವ ಸರ್ವೆ ನಂ. 41. ಪಶ್ಚಿಮಕ್ಕೆ —ಸಾಗುವಳಿಯಲ್ಲಿರುವ ಸರ್ವೆ ನಂ. 45.
7	ಆನೆಚೌಕೂರು ಪ್ಲಾಂಟೇಷನ್ ನಂ. 3 (ತೇಗ)	67 ಎಕರೆಗಳು	ಉತ್ತರಕ್ಕೆ —ಸರ್ವೆ ನಂ. 14ನೇ ಖರಾಬ್. ದಕ್ಷಿಣಕ್ಕೆ —ಡಿಟೋ ಪೂರ್ವಕ್ಕೆ —ಡಿಟೋ. ಪಶ್ಚಿಮಕ್ಕೆ —ಸರ್ವೆ ನಂ. 15ನೇ ಖರಾಬ್.
8	ಮಂಜಗೌಡನಹಳ್ಳಿ ಪ್ಲಾಂಟೇಷನ್ ನಂ. 1 (ತೇಗ)	100 ಎಕರೆಗಳು	ಉತ್ತರಕ್ಕೆ —ಮಂಜೇಗೌಡನಹಳ್ಳಿ ಎಲ್ಲೆ ಲೈನು. ದಕ್ಷಿಣಕ್ಕೆ —ರಾಗಲಕುಪ್ಪೆ ಪ್ಲಾಂಟೇಷನ್. ಪೂರ್ವಕ್ಕೆ —ಮೈಸೂರು, ಮಾನಂತವಾಡಿ ರಸ್ತೆ. ಪಶ್ಚಿಮಕ್ಕೆ —ಸರ್ವೆ ನಂ. 4ನೇ ಖರಾಬ್.
9	ಅಮೃತ ಮಹಲ್ ಪ್ಲಾಂಟೇಷನ್ ನಂ. 1 ಬ್ಲಾಕ್ (ತೇಗ).	55 ಎಕರೆಗಳು	ಉತ್ತರಕ್ಕೆ —ಅಂಕರಸಂತೆ ಅಮೃತಮಹಲ್ ಕಾವಲಿನಲ್ಲಿರುವ ಅಗ್ನಿನಿರೋಧಕ ಲೈನು. ದಕ್ಷಿಣಕ್ಕೆ —ಕಪಿಲಾನದಿ. ಪೂರ್ವಕ್ಕೆ —ಅಮೃತ ಮಹಲ್ ಕಾವಲ್. ಪಶ್ಚಿಮಕ್ಕೆ —ಮೈಸೂರು, ಮಾನಂತವಾಡಿ ರಸ್ತೆ, ಕಪಿಲಾನದಿಗೆ ಹೋಗುವ ಗಲ್ಲಿ.
10	ಡಿಟೋ ನಂ. 2	35 ಎಕರೆಗಳು	ಉತ್ತರಕ್ಕೆ —ಕಪಿಲಾನದಿಗೆ ಹೋಗುವ ಗಲ್ಲಿ. ದಕ್ಷಿಣಕ್ಕೆ —ಸುಂದಾಪುರದ ಗ್ರಾಮಸ್ಥರಿಗೆ ಕೊಟ್ಟಿರುವ ಅಮೃತ ಮಹಲ್ ಕಾವಲ್ ಪ್ಲಾಂಟೇಷನ್ ಜಮೀನು. ಪೂರ್ವಕ್ಕೆ —ಕಪಿಲಾನದಿ. ಪಶ್ಚಿಮಕ್ಕೆ —ಮೈಸೂರು, ಮಾನಂತವಾಡಿ ರಸ್ತೆ.
11	ಕಪಿಲಾ ಪ್ಲಾಂಟೇಷನ್ ಬ್ಲಾಕ್ ನಂ. 1 (ತೇಗ)	50 ಎಕರೆಗಳು	ಉತ್ತರಕ್ಕೆ —ಸರ್ವೆ ನಂ. 23ನೇ ಗೋಮಾಳ. ಪೂರ್ವಕ್ಕೆ —ಸರ್ವೆ ನಂ. 6, 16 ವ 23. ದಕ್ಷಿಣಕ್ಕೆ —ಆನಿಪುರದ ಎಲ್ಲೆಯ ಸರ್ವೆ ನಂ. 1. ಪಶ್ಚಿಮಕ್ಕೆ —ಕಪಿಲಾನದಿ.
12	ಡಿಟೋ ನಂ. 2	54¾ ಎಕರೆಗಳು	ಉತ್ತರಕ್ಕೆ —ಸರ್ವೆ ನಂ. 19 ಮತ್ತು ಗುಂಡತೂರ ಎಲ್ಲೆ. ದಕ್ಷಿಣಕ್ಕೆ —ಆನಿಪುರ ಗ್ರಾಮದ ಸರ್ವೆ ನಂ. 1. ಪೂರ್ವಕ್ಕೆ —ಗುಂಡತೂರ ಎಲ್ಲೆ. ಪಶ್ಚಿಮಕ್ಕೆ —ಕಪಿಲಾನದಿ.

ಕ ಕ೮

ನಂಬರ್.	ಫಾರೆಸ್ಟ್ಗಳ ಮತ್ತು ಪ್ಲಾಂಟೇಷನ್ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
13	ಬಿಸಪ್ಪನಕಟ್ಟೆ ಪ್ಲಾಂಟೇಷನ್ (ಸದಲ್)	7¼ ಎಕರೆಗಳು	ಉತ್ತರಕ್ಕೆ—ಸುಗುವಳ್ಳಿಯಲ್ಲಿರುವ ಸರ್ವೆ ನಂ. 55 ಮತ್ತು 68. ದಕ್ಷಿಣಕ್ಕೆ—ಮೈಸೂರು, ಮಾನಂತವಾಡಿ ರಸ್ತೆ. ಪೂರ್ವಕ್ಕೆ—ಸರ್ವೆ ನಂ. 43ನೇ ಖರಾಬ್. ಪಶ್ಚಿಮಕ್ಕೆ—ಬಿಸಪ್ಪನಕಟ್ಟೆ ಸರ್ವೆ ನಂ. 57.
14	ಹಂಪಾಪುರದ ಪ್ಲಾಂಟೇಷನ್ (ಸಂದಲ್)	327¾ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 42ನೇ ಖರಾಬ್. ಪೂರ್ವಕ್ಕೆ—ಹರನಹಳ್ಳಿ ಮತ್ತು ವಂದನಹಳ್ಳಿ ಗ್ರಾಮಗಳ ಎಲ್ಲೆ [illegible]ಗಳು. ದಕ್ಷಿಣಕ್ಕೆ—ಸರ್ವೆ ನಂ. 43ನೇ ಖರಾಬಿನಲ್ಲರುವ ಅಗ್ನಿನಿರೋಧಲ್ಲೆ. ಪಶ್ಚಿಮಕ್ಕೆ—ಸರ್ವೆ ನಂ. 44, 34, 35, 37, 38, 41 ಮತ್ತು 40.
15	ವೀರನಹೊಸಹಳ್ಳಿ ಫಾರೆಸ್ಟ್ (ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳು)	ಸುಮಾರು 9 ಚದುರ ಮೈಲಿಗಳು	ಉತ್ತರಕ್ಕೆ—ಮೈಸೂರು ಕೊಡಗು ಎಲ್ಲೆಯಲ್ಲಿ ಲಕ್ಷ್ಮಣತೀರ್ಥ ನದಿ ತನ್ನಷ್ಟಕ್ಕೆ ತಾನೇ ಪೂರ್ವಕ್ಕೆ ಬೊಗ್ಗಿ ಗಡಿಯಾಚೆಯ ಮುಳ್ಳುಗಳ ಹಾಗೆ ಹೋಗುವ ಸ್ಥಳದಿಂದ ಹೊರಟು ಎಲ್ಲೆಯು ಲಕ್ಷ್ಮಣತೀರ್ಥ ನದಿಯು ಉದ್ದಕ್ಕೂ ಪೂರ್ವಕ್ಕೆ ಹೋಗಿ ಕೋನನ ಹೊಸಹಳ್ಳಿಯ ಗ್ರಾಮದ ಎಲ್ಲೆ ಕಟ್ಟೆಯವರೆಗೆ ಕಾಜೋನಹಳ್ಳಿ ಜಂಗಲಿಗೆ ಸೇರಿದ ಹಾಗೆ ಹೋಗಿ ಅಲ್ಲಿಂದ ಅಗ್ನಿ ದಿಕ್ಕಿಗೆ ಹೊರಟು ಪುನಹ ಲಕ್ಷ್ಮಣತೀರ್ಥ ನದಿಗೆ ಸೇರುವ ಪರಿಯಂತ ಕೋನನ ಹೊಸಹಳ್ಳಿಯ ಸರ್ವೆ ಎಲ್ಲೆ ಕಟ್ಟೆಯ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಸದರೀ ನದಿಯ ಉದ್ದಕ್ಕೂ ಪೂರ್ವ ಪಾರ್ಶ್ವ, ದಕ್ಷಿಣ ಪಾರ್ಶ್ವ ಮತ್ತು ಪಶ್ಚಿಮ ಪಾರ್ಶ್ವ ಪ್ಲಾಂಮಾಡಲ್ಪಟ್ಟ 7 ಗಜಗಳ ಡಿವಾರ್ಕೇರ್ಷ್ ಲೈನಿಗೆ ಸೇರುವವರೆವಿಗೆ ಹೊರಟು ಮತ್ತು ಕೊಲವಿಗೆಯ ಸರ್ವೆ ಎಲ್ಲೆಕಟ್ಟೆಯ ಉದ್ದಕ್ಕೂ ದಕ್ಷಿಣ ಪಾರ್ಶ್ವ ಹಾದು ಮತ್ತು ಎರೆಕಟ್ಟೆ ಸವಿಾಪ ಮೂರ್ಕಲ್‌ವೀರನ ಹೊಸಹಳ್ಳಿ ಫಾರೆಸ್ಟ್ಟಿ ರಸ್ತೆಗೆ ಸೇರುವವರಿವಿಗೆ ಕಡಗತಲ್‌ಕಟ್ಟೆ ವ ಕುರುಬರ ಪಾರೆ ಮಾರ್ಗವಾಗಿ ಮುದಗನೂರು ಮತ್ತು ಚಿಕ್ಕಹೆಜ್ಜೂರುಗಳ ಸರ್ವೆ ಎಲ್ಲೆಕಟ್ಟುಗಳ ಉದ್ದಕ್ಕೂ ಆಗ್ನೇಯ ದಿಕ್ಕಿಗೆ ಹಾದು ಹೋಗುತ್ತದೆ. ಪೂರ್ವಕ್ಕೆ—ಮೇಲ್ಕಂಡ ಸ್ಥಳದಿಂದ ಪೂರ್ವ ಪಾರ್ಶ್ವದ ಎಲ್ಲೆಯು 7 ಗಜಗಳ ಡಿವಾರ್ಕೇರ್ಷ್ ಲೈನಿನ ಉದ್ದಕ್ಕೂ ಹಿತ್ತಲ್‌ಗೂಡು ಮಾಯೇಸಿಕಟ್ಟೆ ಪಾರೆ ಮಾರ್ಗವಾಗಿ ಅದು ಮೂರು ಹೆಬ್ಬಹಳ್ಳಗಳು ದಾಟಿ ಸೊಳ್ಳೆಪುರದ ಸೇರು ಹೆಬ್ಬಹಳ್ಳದ ದಕ್ಷಿಣಕ್ಕೆ ಇರುವ ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕುಗಳ ಎಲ್ಲೆ ಸಲ್ಲನಬಳಿ ಸೇರುವ ವರೆವಿಗೂ ಹೋಗುತ್ತದೆ. ದಕ್ಷಿಣಕ್ಕೆ—ಹಿಂದೆ ಹೇಳಿದ ಸ್ಥಳದಿಂದ ಎಲ್ಲೆಯು ದಕ್ಷಿಣಕ್ಕೆ ಅದು ಮೂರ್ಕಲ್ ಮೇಟಿಕುಪ್ಪೆ ಬಂಡಿಜಾಡಿಗೆ ಸೇರುವ ವರೆವಿಗೂ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಡಿವಾರ್ಕೇರ್ಷ್ ಲೈನಿನ ಉದ್ದಕ್ಕೂ ಹೊರಟು ಅಲ್ಲಿಂದ ವಾಯವ್ಯ ದಿಕ್ಕಿಗೆ ಈ ಬಂಡಿಜಾಡಿನ ಉದ್ದಕ್ಕೂ ಅದು ಕರಮಾಡು ಮೂರ್ಕಲ್ ಎಂಬಲ್ಲಿಗೆ ಕರೆದುಬರಲ್ಪಟ್ಟ ಕೊಡಗು, ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ತ್ರಿಸಂಗಮ ಎಲ್ಲೆ ಕಂಬಗಳ ಬಳಿ ಸೇರುವ ವರೆವಿಗೂ ಹೋಗುತ್ತದೆ. ಪಶ್ಚಿಮಕ್ಕೆ—ಈ (ಕರಮಾಡು ಮೂರ್ಕಲ್) ಸ್ಥಳದಿಂದ ಎಲ್ಲೆಯು ಎಲ್ಲೆ ಕಂಬಗಳಿಂದಲೂ ಮತ್ತು ಗುಣಿಗಳಿಂದಲೂ ಹೊರಟು ಸ್ಥಳದ ವರೆಗೆ ಗುರ್ತು ಮಾಡಿದ ಕೊಡಗು ಮತ್ತು ಮೈಸೂರ ಎಲ್ಲೆಯ ಉದ್ದಕ್ಕೂ ಆನಿಕಟ್ಟೆ ಹಳ್ಳ, ಚೌಡಿಕಟ್ಟೆ ಮತ್ತು ಭದ್ರಿಕಟ್ಟೆ ಹಳ್ಳಸ್ತಿತಿ ಮಾರ್ಗವಾಗಿ ಲಕ್ಷ್ಮಣತೀರ್ಥ ನದಿವರೆಗೆ ಈಶಾನ್ಯ ಮತ್ತು ಉತ್ತರ ದಿಕ್ಕುಗಳಿಗೆ ಹೋಗುತ್ತದೆ.
16	ಚಾಮರಾಜನಗರದ ಫಾರೆಸ್ಟ್ (ಚಾಮರಾಜನಗರದ ತಾಲ್ಲೂಕು)	98½ ಚದುರ ಮೈಲಿಗಳು	ಉತ್ತರಕ್ಕೆ—ಕಪ್ಪೆಕಲ್ಲು ಆಲದಮರದ ಬಳಿ ಗೊತ್ತು ಮಾಡಿದ ಎಲ್ಲೆ ಗುರ್ತುಗಳಿಂದ ಲೈನು ಪೂರ್ವಕ್ಕೆ ಹೊರಟು ಸೂಳೆಕಲ್ ಕಟ್ಟೆವನ್ನ ಎಡಕ್ಕೆ ಬಿಟ್ಟುಕೊಂಡು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(a) ಕೊಂಗನ ಕಾಡು ಹನುಮನಕಲ್ಲು, (b) ಕಂಬುಕಲ್ಲು ಕಣಿವೆಯ ಮೇಲ್‌ಭಾದಲ್ಲಿ ಗೊತ್ತು ಮಾಡಿದ ಎಲ್ಲೆ ಗುರ್ತು, (ಅಲ್ಲಿಂದ ಲೈನು ಸೇರುತ್ತದೆ.) (c) ಹೊರಟ ಸ್ಥಳವಾದ ಹೊನ್ನುವುತ್ತಿ ಬೆಟ್ಟದಬಳಿ ಗೊತ್ತು ಮಾಡಲ್ಪಟ್ಟ ಮುಗ್ಗುಡ್ಡೆ ಎಲ್ಲೆ ಗುರ್ತುಗಳು. ಪೂರ್ವಕ್ಕೆ—ಕೊಯಿ ಮುತ್ತೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳ ಮಧ್ಯೆ ಕತರಾಯಿಸಿದ ಡಿವಾರ್ಕೇರ್ಷ್ ಲೈನು ಹೊನ್ನೆವುತ್ತಿ ಬೆಟ್ಟದ ಮೇಲೆ ಗೊತ್ತು ಮಾಡಿದ (ಮೂಗುಡ್ಡೆ) ಎಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳ ತ್ರಿಸಂಗಮ ಬಳಿ ಪ್ರಾರಂಭಿಸಿ ಹೊರಟು ಈ ಕೆಳಗೆ ಕಂಡ ಜನ್ನಾಗಿ ಕಣಿವೆಕಲ್ಲು ಕಡ್ಲಕ್ಕಿಗಳ ಉದ್ದಕ್ಕೂ ದಕ್ಷಿಣಕ್ಕೆ ಹೋಗುತ್ತದೆ:—(a) ಅತ್ತಿಮರದ ಕಣಿವೆ, (b) ದೇವಿಗೆರೆ, (c) ಕೆಂಚನಮೂರನ ಕಣಿವೆ, (d) ಗೆರ್ಸೆಕಲ್ಲು ಮತ್ತು (e) ಬೆಳ್ಳಿ ಮುರಿಕೆರೆ.

559

ನಂಬ್ರ.	ಫಾರೆಸ್ಟುಗಳ ಮತ್ತು ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	98½ ಚದುರ ಮೈಲಿಗಳು	ದಕ್ಷಿಣಕ್ಕೆ—ಮೇಲ್ಕಂಡ ಹಳ್ಳಿಮುರಿ ಆರಂಭದಿಂದ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಪಶ್ಚಿಮಕ್ಕೆ ಹೋಗುತ್ತದೆ:—(a) ಸಿರಗೋಡಿಹಳ್ಳ, (b) ಚಿಟ್ಟನಕೊಪ್ಪದ ಮಲೆ, (c) ಹೊನ್ನುಹೊಳೆ (ಹುಣಸೂರು ಪೂರ್ವದ ಕೊಯಿಮುತ್ತೂರು ಮತ್ತು ಮೈಸೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಲೈನು), (d) ಕರೆಪಾಳ್ಯದ ಬಳಿ ಗೊತ್ತು ಮಾಡಿದ ಎಲ್ಲೆ ಕಂಬ, (e) ಜೆಪ್ಪರದ ನಾಯಿಜೇಲದ ಪಟ್ಟ, (f) ದೇಬನಮಡು, (g) ದೊಡ್ಡನ ಆನೆಪಟ್ಟ, (h) ಪುಟ್ಟದ ಈರನ ಸೊಣ್ಣೆಪಟ್ಟ, (i) ಮೂಕನಪಾಳ್ಯದ ಎಲ್ಲೆ ಗುರ್ತುಗಳು, (j) ಗುಳಗುಡ್ಡೆ ಪಟ್ಟ, (k) ಕುಂಬಾರಗುಂಡಿ, (l) ಪುಮಾರು ಮೊದಲು ಮೈಲಿ ವರಿವಿಗೆ ಚಾಮರಾಜನಗರ, ಹಸನೂರು ರಸ್ತೆಯ ಪೂರ್ವದಲ್ಲಿ ಗೊತ್ತು ಮಾಡಿದ ಮೈಸೂರ ಮತ್ತು ಕೊಯಿಮುತ್ತೂರು ಫಾರೆಸ್ಟಿನ ಮಧ್ಯೆ ಇರುವ ಎಲ್ಲೆ ಗುರ್ತುಗಳು, (m) ಹೊನ್ನೇಗವ್ವನಹಳ್ಳಿ ಮತ್ತು ಸಣ್ಣನಪುರದ ಎಲ್ಲೆ ಗುರ್ತುಗಳು, ಮತ್ತು (n) ಅತ್ತಿಕಲಿಪುರದ ಬಳಿ ಕತರಾಯಿಸಿರುವ ಹೊಸ ಡಿವಾರ್ಕೇಷನ್ ವರಿವಿಗೆ ಮೈಸೂರು ಮತ್ತು ಕೊಯಿಮುತ್ತೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಗುರ್ತುಗಳು. ಪಶ್ಚಿಮಕ್ಕೆ—ಎಳಂದೂರು ಮತ್ತು ಚಾಮರಾಜನಗರದ ಎಲ್ಲೆ ಗುರ್ತುಗಳು ಗೊತ್ತು ಮಾಡಿರುವ ಅತ್ತಿಕಲಿಪುರದಿಂದ ಕಟ್ಟೆಚಲ್ಲಾ ಆಲದ ಮರದ ವರಿವಿಗೆ ಹೊಸದಾಗಿ ಕತರಾಯಿಸಿದ ಡಿವಾರ್ಕೇಷನ್ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(1) ಹೊಂಗಲವಾಡಿಗೆ ರಸ್ತೆ, (2) ಅಲ್ಲಿಂದ ಗುಡ್ಡ ಮತ್ತು (3) ಅಣ್ಣಪಮ್ಮಂದಿರ ಗುಡ್ಡ.
17	ಪಡಲೂರು ಪ್ಲಾಂಟೇಷನ್ (ಚಾಮರಾಜನಗರದ ತಾಲ್ಲೂಕು)	40 ಎಕರೆಗಳು	ಉತ್ತರಕ್ಕೆ—ಸರ್ಕಾರದ ಬಂಜರು ಜಮೀನು. ಪೂರ್ವಕ್ಕೆ—ಡಿಟೋ. ದಕ್ಷಿಣಕ್ಕೆ—ಹಾಸನೂರು, ಚಾಮರಾಜನಗರದ ರಸ್ತೆ. ಪಶ್ಚಿಮಕ್ಕೆ—ಸರ್ಕಾರದ ಬಂಬರ್ ಜಮೀನು. (ಇದು ಪಡಲೂರಿನ ಕೀಚಿರ್ಕಾಕ್ ಗ್ರಾಮದಲ್ಲಿರುತ್ತೆ ಮತ್ತು ಸರ್ವೆ ನಂ. 11, 12, 13, [illegible] 17, 18 ಮತ್ತು 20ರ ಭಾಗಗಳನ್ನು ಅಡಗಿಸಿಕೊಂಡಿರುತ್ತೆ.)
18	ಮದ್ದೂರ ಪ್ಲಾಂಟೇಷನ್ (ಅಳಲೇಕಾಯಿ) ಗುಂಡ್ಲುಪೇಟೆ ತಾಲ್ಲೂಕು	460 ಎಕರೆಗಳು	ಉತ್ತರಕ್ಕೆ—ಮದ್ದೂರು ಗ್ರಾಮದ ಸರ್ವೆ ನಂ. 34ರ ಭಾಗ. ಪೂರ್ವಕ್ಕೆ—ಮದ್ದೂರ ಕೆರೆ. ದಕ್ಷಿಣಕ್ಕೆ—ಗುಂಡ್ಲುಪೇಟೆ, ಸುಲ್ತಾನರ ಬತೇರಿ ರಸ್ತೆ. ಪಶ್ಚಿಮಕ್ಕೆ—ಮದ್ದೂರ ಗ್ರಾಮದ ಸರ್ವೆ ನಂ. 34ರ ಭಾಗ.
19	ಹೊಂಗಹಳ್ಳಿ ಪ್ಲಾಂಟೇಷನ್	50 ಎಕರೆಗಳು	ಉತ್ತರಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗಹಳ್ಳಿ ಬಂಡಿಜಾಡು. ಪೂರ್ವಕ್ಕೆ—ಮಾಸಹಳ್ಳಿ ಗುಜ್ಜೆ. ದಕ್ಷಿಣಕ್ಕೆ—ಕುಣಿಗಲ್ ಗ್ರಾಮದ ಎಲ್ಲೆ. ಪಶ್ಚಿಮಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗಹಳ್ಳಿ ಬಂಡಿಜಾಡು.

ತಾರೀಖು 2ನೇ ನವೆಂಬರ್ 1896.

ನಂ. 4164–ರೆ. ಫೈ. 103–95, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸಂಧಿ ಮಾಗಡಿ ತಾಲ್ಲೂಕು ಅಮಲ್ದಾರ್ ಎಂ. ಎ. ತಿರುಮಲಾಚಾರ್ಯರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ ಕೇಶವಯ್ಯಂಗಾರ್ರು ಸದರೀ ತಿರುಮಲಾಚಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಾಗಡಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಫ್ಟಿಂಗ್ ತರೀಕ್ ಮೊಕರರ್ರಾಮಡಲ್ಪಟ್ಟಿರುತ್ತಾರೆ.

ನಂ. 4098.—ಎಕ್ಸೈ. 156, ಮೈಸೂರ ಎಕ್ಸೈಜ್ ಕಮ್ಮಿಷನರವರಿಗೆ ಅಸಿಸ್ಟೆಂಟರಾದ ಮೆಸ್ಸರ್ ಎಂ. ವಿ, ಜೇವಿಯವರ ಸರ್ಕಾರ್ ಹುದ್ದೆಯು 1896ನೇ ಅಕ್ಟೋಬರ್ 15ನೇ ತಾರೀಖು ಲಾಗಾಯತು "ಮೈಸೂರ ಡೆಪ್ಯುಟಿ ಎಕ್ಸೈಜ್ ಕಮ್ಮಿಷನರ್" ಹುದ್ದೆಗೆ ಬದಲಾಯಿಸಲ್ಪಟ್ಟಿದೆ.

ತಾರೀಖು 16ನೇ ಅಕ್ಟೋಬರ್ 1896.

ನಂ. 3836.—ರೆ. 1322. ಸ್ಯ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಸ್ಸೈಜಿಷ್ಟ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮ್ಮಿಗಳು ಸರ್ಕಾರ್ ಕೆಲಸಕ್ಕೆ ಅಂದರೆ ಎಡಹಳ್ಳಿ ಸಬ್ ತಾಲ್ಲೂಕಿನಲ್ಲಿ ಭದ್ರಾಕ್ಕೆ ಅಡ್ಡವಾಗಿರುವ ಬಾಳೇಹೊನ್ನೂರು ಸೇತುವೆಯ ಕಟ್ಟೆ ವಗೈರೆ ಕಟ್ಟುವ ಬಗ್ಯಾಗೆ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟ್.	ತಾಲ್ಲೂಕು.	ಗ್ರಾಮ	ಹಿಡುವಳಿದಾರ್ರ ಹೆಸರು.	ಜಮೀನಿನ ತಪ್ಶೀಲು.				ಚಕ್ಕುಬಂದಿ.			
				ವಿವರಣೆ.	ಸರ್ವೇ ನಂ.	ವಿಸ್ತೀರ್ಣ. ಎ. ಗುಂ	ಬೇರೀಜು. ರೂ.ಆ.ಪೈ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು.	ಎಡಹಳ್ಳಿ.	ಕಣಬೂರು	ಲಿಂಗೇಗವುಡ	ತರೀ	1ರ ಭಾಗ	1—32	6—0—0	ಲಿಂಗೇಗವುಡನ ಖಾತೇಜಮ್ಮಿ ನಂ. 1 ತರೀ.	ವಸ್ತಾರಾ ಕೊಪ್ಪದ ಹೈರೋಡ್ ಬ್	ಸರ್ವೆ ನಂ. 107 ಖರಾಡು	ಕಳಸಾ ರೋಡು
		ಡಿಟೋ	ಸಿರ್ವಮೇಸ್ತ್ರಿ	ತರೀ	108ರ ಭಾಗ	2—23	9—0—0	ವಸ್ತಾರಾ ಕೊಪ್ಪದ ಹೈರೋಡು	ನಂ. 108 ರ ಭಾಗ	ನದಿಗೆ ಹೋಗುವ ಹಳೇ ರಸ್ತೆ	ವಸ್ತಾರಾ ಕೊಪ್ಪದ ಹೈರೋಡು
		ಕರಹ ಮೆಂ ಕ್ಲಿಫ ಡ್ಲಿರ್		ಕಾಫಿ	1ರ ಭಾಗ	2—30	..	ಡಿಟೋ	ಭದ್ರಾನದಿ	ಕಾಫಿ ಜಮ್ಮಿನು ನಂ. 11	ಕಾಫಿ ಜಮ್ಮಿ ನಂ. 12
		ಡಿಟೋ	ಡಿಟೋ	ಕಾಫಿ	12	3—8	5—0—0	ಸರ್ವೆ ನಂ. 11	ಡಿಟೋ	ಸರ್ವೆ ನಂ. 11	ಭದ್ರಾನದಿ ಮತ್ತು ವಸ್ತಾರಾ ಕೊಪ್ಪದ ಹೈರೋಡು

ತಾರೀಖು 3ನೇ ನವೆಂಬರ್ 1896.

ನಂ. 4112.—ರೆ. ಫೈ. 33.—96, ಬೆಂಗಳೂರು [illegible] ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಅಕ್ಟೋಬರ್ 24ನೇ ಮಾರ್ಕ್ಕಂ 3940.—ರೆ. ಫೈ. 33.—1896—97ನೇ ನಂಬರಿನೊಡನೆ ಆಳ್ಕೆರಾಗುವ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟಿದ್ದ ಎರಡು ತಿಂಗಳೂ ಐದು ದಿನಗಳ ಪ್ರಿವಿಲೀಜ್ ರಜಾವನ್ನ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕಾಹಿಲೆ ರಜಾಕ್ಕೆ ಬದಲಾಯಿಸಲ್ಪಟ್ಟು ಇನ್ನೂ ಆರು ವಾರಗಳ ವರೆವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ನವೆಂಬರ್ 1896.

ನಂ. 4251.—ಫಾ. ಫೈ. 1—96, ತುಮಕೂರು ಡಿಸ್ಟ್ರಿಕ್ಟಿಗೆ ಒಳಿತವಾದ ಫಾರೆಸ್ಟ್ಗಳ ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಮೆಸ್ಸರ್ ಪಿ. ಈ. ಬ್ಯರ್ಸ್ಸವರಿಗೆ 1896ನೇ ಸೆಪ್ಟೆಂಬರ್ 5ನೇ ಮಾರ್ಕ್ಕಂ 2692—ಫಾ. ಫೈ. 1—96ನೇ ನಂಬರು ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನು ಬಂದು ದಿನ ಜಾಸ್ತಿ ಮಾಡಲ್ಪಟ್ಟ ಯಾವತ್ಕಾಲವು ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 172ನೇ ಆರ್ಟಿಕಲ್ ಅನುಸರಿಸಿ ಕ್ಯಾಜುಯಲ್ ರಜಾವಾಗಿ ಭಾವಿಸಲ್ಪಟ್ಟಿರುತ್ತೆ.

ತಾರೀಖು 8ನೇ ನವೆಂಬರ್ 1896.

ನಂ. 4232.—ರೆ. ಫೈ. 125.—95, ತರೀಕೆರೆ ತಾಲ್ಲೂಕು ಅಮಲ್ದಾರ್ ಎ. ಸುಬ್ಬರಾಯರಿಗೆ, 1896ನೇ ಆಗಸ್ಟ್ 24ನೇ ಮಾರ್ಕ್ಕಂ 2128.—ರೆ. ಫೈ. 125.—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ದಿನಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ. 4236—ರೆ. ಫೈ. 37—96—7, ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲು ಯವರು ಅವರಿಗೆ 1896ನೇ ಅಕ್ಟೋಬರ್ 5ನೇ ಮಾರ್ಕ್ಕಂ ಕ್ಯಾಂಪ್ 4ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾವನ್ನ 1896ನೇ ಆಗಸ್ಟ್ 28ನೇ ತಾರೀಖಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಅಕ್ಟೋಬರ್ 10ನೇ ಮಾರ್ಕ್ಕಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದಿರುವ ಸಬಬ್ ಉಪಯೋಗಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ. 4239.—ರೆ. ಫೈ. 49—96, ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಅಮಲ್ದಾರ್ ಕೃಷ್ಣಾರಸನವರಿಗೆ 1896ನೇ ಸೆಪ್ಟೆಂಬರ್ 9ನೇ ಮಾರ್ಕ್ಕಮಿನಲ್ಲಿ ಬಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 8ನೇ ನವೆಂಬರ್ 1896.

ನಂ. 4242—ರೆ. ಫೈ. 138—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಟಗಳ 172ನೇ ಆರ್ಟಿಕಲ್ ಅನುಸರಿಸಿ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಆಮಲ್ದಾರ್ ಜಿ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

ತಾಲ್ಲೂಕು ಶಿರಸ್ತೇದಾರ್ ರಂಗಣ್ಣನವರು ಸರೀ ಹನುಮಂತರಾಯರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಆಮಲ್ದಾರ್ ಪ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೇ ನವೆಂಬರ್ 1896.

ನಂ. 4215.—ರೆ. ಫೈ. 33—96—97, ಬೆಂಗಳೂರು ತಾಲ್ಲೂಕು ಆಮಲ್ದಾರ್ ಪ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಪಿ. ಸೀತಾರಾಮಯ್ಯನವರು ಮೆಸ್ಸರ್ ಕೆ. ಶ್ರೀನಿವಾಸರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ವ 1ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ನವಂಬರ್ 1896.

ನಂ. 4248.—ಫಾ. ಫೈ. 26.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಟಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಗವರ್ಮೆಂಟ್ ವೃಕ್ಷವರ್ಗದ ತೋಟಗಳ ಸೂಪರ್ಟೆಂಡೆಂಟ್ ಮೆಸ್ಸರ್ ಜೆ. ಕ್ಯಾಮರ್ಫ್ ಯವರಿಗೆ, ಮಹೆ ಮಜಕೂರ್ 13ನೇ ಮರ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

ನಂ. 4255—ಫಾ. ಫೈ. 60—95, ಫಾರೆಸ್ಟ್ಸಾಗಳ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆಸ್ಸರ್ ಜಿ. ಈ. ರಿಕೆಟ್ಟ್ಸ್‌ಯವರು ಅವರಿಗೆ 1895ನೇ ಆಗಸ್ಟ್ 10ನೇ ಮರ್ತುಂ 1746—ಫಾ. 96ನೇ ನಂಬರ್ ಮತ್ತು ಡಿಸಂಬರ್ 13ನೇ ಮರ್ತುಂ 5491—ಫಾ. ಫೈ. 60—95ನೇ ನಂಬರ್ ಇಸ್ತಿಹಾರ್‌ನಾಮೆಗಳಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಕಾಹಿಲೆ ರಜಾದಿಂದ ಅಕ್ಟೋಬರ್ 26ನೇ ಮರ್ತುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದದ್ದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ 26 ದಿವಸಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ನವಂಬರ್ 1896.

ನಂ. 4312.—ರೆ. ಫೈ. 70—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಟಗಳ 172ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸೇಟಿ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಆಮಲ್ದಾರ್ ಏ. ಕೃಷ್ಣಸ್ವಾಮಿ ಅಯ್ಯಂಗಾರ್ ಯವರಿಗೆ, 1896ನೇ ನವಂಬರ್ 4ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಯಿತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ನವಂಬರ್ 1896.

ನಂ. 4349.—ರೆ. 1503, ಮೆಸ್ಸರ್ ಪಿ. ಸೀತಾರಾಮಯ್ಯನವರು ಬೇರೆಕೆಲಸದ ಮೇಲೆ ಇರುವ ಕಾಲದಲ್ಲಿ ಈ ಕೆಳಗೆ ಕಂಡ ಹಂಗಾಮಿ ವಿವರ್ಜಾಡುಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಚನ್ನಪಟ್ಟಣ ತಾಲ್ಲೂಕು ಆಮಲ್ದಾರ್ ಬಾದಾಮಿ ಕೃಷ್ಣರಾಯರು ಬೆಂಗಳೂರು ತಾಲ್ಲೂಕು ಆಮಲ್ದಾರ್‌ರಾಗಿರತಕ್ಕದ್ದು. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಆಮಲ್ದಾರ್ ಏ. ಕೃಷ್ಣಸ್ವಾಮಿ ಅಯ್ಯಂಗಾರ್, ಬಿ. ಏ., ಯವರು, ಚನ್ನಪಟ್ಟಣ ತಾಲ್ಲೂಕು ಆಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ ಮಾಡತಕ್ಕದ್ದು. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರ್ಟೆಂಡೆಂಟರವರ ಆಫಿಸಿನ ಹೆಡ್ ಕ್ಲಾರ್ಕ್ ನರಸಿಂಹ ಶ್ರೀನಿವಾಸಪೋಟ್ಟನ್‌ಯವರು, ಕ್ಲೋಸ್‌ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಆಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ ಮಾಡತಕ್ಕದ್ದು. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಹುಕುಂ ಬಮ್ಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.